ಗ್ರಾನೈಟು ಕಲ್ಲುಗಳ ರಫ್ತು

೬೧. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ್).— ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದೆಯಿಯಿಟ್ಟು ತಿಳಿಸುವರೆ.—

(ಅ) ರಾಷ್ಟ್ರೀಯ ಹೆದ್ದಾರಿ ಗಡಿಯಲ್ಲಿರುವ ಇಲಕಲ್ಲ–ಕೂಷ್ಟಗಿಯಿಂದ ೫೫ ಕಿ.ಮೀ., ಅಂತರದಲ್ಲಿನ ಹಾಗೂ ಕೆ. ಹುಬ್ಬಳ್ಳಿಯ ಗಣಿಗಳಿಂದ ಗ್ರಾನೈಟು ಕಲ್ಲುಗಳನ್ನು ಖಾಸಗಿ ಗಣಿ ಉದ್ದಿಮೆದಾರರು ೧೯೭೯ ರಿಂದ ವಿದೇಶಗಳಿಗೆ ರಫ್ತು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಆ ಖಾಸಗಿ ಉದ್ದಿಮೆಗಳ ಹೆಸರೇನು ;

(ಇ) ಅಂತಹ ಉದ್ದಿಮೆಗಳಲ್ಲಿ ಸಹಭಾಗಿಗಳ ಸಂಖ್ಯೆ ಎಷ್ಟು ಮತ್ತು ಅವರ ಹೆಸರುಗಳೇನು ?

(ಈ) ಆ ಗಣಿಗಳಿಂದ ಸರ್ಕಾರಕ್ಕೆ ಬರುವ ಗೌರವಧನದ ಮೊತ್ತವೆಷ್ಟು ?

(ಉ) ಖಾಸಗಿ ಒಡೆತನದ ಗಣಿ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರ ಸರಕಾರಕ್ಕಿದೆಯೆ ? *

ವಿಷಯ : ಹಾರಂಗಿ ಯೋಜನೆ

೬೨ ಶ್ರೀ. ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಹಾರಂಗಿ ಯೋಜನೆ ಯಾವ ಹಂತದಲ್ಲಿದೆ ?

(ಆ) ಈ ಯೋಜನೆ ಯಾವಾಗ ಪೂರ್ಣ ಗೊಳ್ಳುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು.)

(ಅ) ೧. ಆಣೆಕಟ್ಟಿನ ಕಾರ್ಯ ಮುಗಿದಿದ್ದು, ಶೃಂಗಾರಗೊಳಿಸುವ ಕಾರ್ಯಗಳು ಪ್ರಗತಿಯಲ್ಲಿವೆ.

೨. ಎಡದಂಡೆ ನಾಲೆಯಲ್ಲಿ ೬೦ ನೆಯ ಕಿ. ಮೀ. ವರೆಗೂ ಜೂನ್ ೮೨ ರಲ್ಲಿ ನೀರು ಬಿಡಲಾಗಿದೆ. ಜೂನ್ ೮೩ ರ ವೇಳೆಗೆ ೧೦೦ ನೆಯ ಕಿ. ಮೀ. ವರೆಗೆ ನೀರು ಬಿಡುವ ಕಾರ್ಯಕ್ರಮವಿದೆ. ಕಾಲುವೆಯ ಕೊನೆಯವರೆಗೂ ಅಂದರೆ ೧೩೮ ಕಿ. ಮೀ. ವರೆಗೂ ಕೆಲಸಗಳು ನಡೆಯುತ್ತಿವೆ.

೩. ಬಲದಂಡೆ ನಾಲೆಯಲ್ಲಿ, ೧೫ ಕಿ. ಮೀ. ವರೆಗೂ ಜೂನ್ ೮೨ ರಲ್ಲಿ ನೀರು ಬಿಡಲಾಗಿದೆ. ಜೂನ್ ೮೩ ರ ವೇಳೆಗೆ ೩೦ ನೆಯ ಕಿ. ಮೀ. ವರೆಗೆ ನೀರು ಬಿಡುವ ಕಾರ್ಯಕ್ರಮವಿದೆ. ೯೫ನೇ ಕಿ. ಮೀ ವರೆಗೂ ಕೆಲಸಗಳು ನಡೆಯುತ್ತಿವೆ.

೪. ಕೊಪ್ಪ ಉಪನಾಲೆ ೧೨ ನೆಯ ಕಿ. ಮೀ. ವರೆಗೂ ಪೂರ್ಣಗೊಂಡಿದ್ದು, ೧೩ ರಿಂದ ೧೬ನೆಯ ಕಿ. ಮೀ. ವರೆಗಿನ ಕೆಲಸ ಮುಕ್ತಾಯ ಹಂತದಲ್ಲಿದೆ.

೫. ಕೆ. ಆರ್, ನಗರ ಉಪನಾಲೆ ೪೦ ಕಿ. ಮೀ. ವರೆಗೂ ಪ್ರಗತಿಯಲ್ಲಿದ್ದು, ಜೂನ್ ೮೪ ರ ವೇಳೆಗೆ ೧೦ ಕಿ. ಮೀ. ವರೆಗೆ ಮುಗಿಸಲು ಪ್ರಯತ್ನಿಸಲಾಗುತ್ತಿದೆ.

(ಆ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ೧೯೮೬–೮೭ ರಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

---

* Reply not received.